**ಇಂಟೀರಿಯರ್ ಆಗಲಿ ಅಥವಾ ಎಕ್ಸ್‌ಟೀರಿಯರ್ ಆಗಲಿ,**
**ಟೆಕ್ಸ್ಚರ ಯಾವಾಗಲೂ ಸುಪಿರೀಯರ್ ಆಗಿರುತ್ತೆ!**

**ಕೈಗೆಟುಕುವ ಬೆಲೆ | ಹಲವಾರು ಬಣ್ಣಗಳ ಸ್ವಾತಂತ್ರ್ಯ | ಹಲವಾರು ಡಿಸೈನ್‌ಗಳು**




***20 kg ಮತ್ತು 25 kg ಯಲ್ಲಿ ಲಭ್ಯ***




# ಟ್ರವೆಲ್ ಫಿನಿಶ್

ಬಿರ್ಲಾ ವೈಟ್ ಟೆಕ್ಸ್ಚರ್ ಟ್ರವೆಲ್ ಫಿನಿಶ್‌ಅನ್ನು ರಸ್ಟಿಕ್ ಫಿನಿಶ್ ಎಂದೂ ಕರೆಯುತ್ತಾರೆ; ಇದು ಒರಟು ಫಿನಿಶ್ ಆಗಿದ್ದು ಹೊರಗಿನ ಗೋಡೆಗಳಿಗೆ ಅತ್ಯುತ್ತಮವಾದದ್ದು. ಇದರ ಸ್ಪೆಶಲ್ ಫಾರ್ಮುಲೇಶನ್ ಗೋಡೆಯನ್ನು ಹವಾಮಾನದ ದುಷ್ಪರಿಣಾಮಗಳ ವಿರುದ್ಧ ಸುರಕ್ಷಿತವಾಗಿ ಇಡುತ್ತದೆ.  ನೀವು ಹಲವಾರು ಶೇಡ್‌ಗಳು ಹಾಗೂ ಟೆಕ್ಸ್ಚರ್‌ಗಳಿಂದ ಆಯ್ದುಕೊಂಡು ನಿಮ್ಮ ಮನೆಗೆ ಸುಲಭವಾಗಿ ಅಂತರರಾಷ್ಟ್ರೀಯ ಮೆಚ್ಚುಗೆ ದೊರೆಯುವಂತೆ ಮಾಡಬಹುದು. ಟ್ರವೆಲ್ ಫಿನಿಶ್‌ಅನ್ನು ಫಿನಿಶ್ ಕಾಂಕ್ರೀಟ್ ಇತ್ಯಾದಿಯಿಂದ ಸಿಮೆಂಟ್ ಪ್ಲಾಸ್ಟರ್ ಮೇಲೆ ಹಚ್ಚಬಹುದು; ಇದು ನೀರು ನಿರೋಧಕವಾದ್ದರಿಂದ, ನೀವು ಇದನ್ನು ಒದ್ದೆ ಮೇಲ್ಮೈ ಮೇಲೂ ಹಚ್ಚಬಹುದು. ಇದು ಅಂಟಿಕೊಳ್ಳುವ ಶಕ್ತಿಯನ್ನು ಹೆಚ್ಚಿಸುತ್ತದೆ ಮತ್ತು ಸಿಮೆಂಟ್ ಆಧಾರಿತವಾಗಿದ್ದರೂ ಕ್ಯೂರಿಂಗ್ ಅಗತ್ಯವಿಲ್ಲದಂತೆ ಮಾಡುತ್ತದೆ.

## ತಾಂತ್ರಿಕ ವಿವರಗಳು

| ಕ್ರಮಾಂಕ | ತಾಂತ್ರಿಕ ವಿವರಗಳು | ನಿರ್ದಿಷ್ಟ ವಿವರಗಳು | ಪರೀಕ್ಷಾ ವಿಧಾನ |
|---|---|---|---|
| 1 | *ಕವರೇಜ್ (Sq.m/kg/coat)<br>[ಆದರ್ಶಪ್ರಾಯ ನಯವಾದ ಮೇಲ್ಮೈ ಮೇಲೆ] | 0.33-0.42 | ಮನೆಯಲ್ಲಿ |
| 2 | ಪಾಟ್ ಲೈಫ್ (ಗಂಟೆಗಳು) | 1.5 - 2.0 | ಮನೆಯಲ್ಲಿ |
| 3 | ಟೆನ್ಸೈಲ್ ಶಕ್ತಿ @28 ದಿನಗಳು (N/mm2) | ≥0.5 | EN 1348 |
| 4 | ನೀರಿನ ಕ್ಯಾಪಿಲ್ಲರಿಗಳ ಹೀರಿಕೆ (ml),<br>30 ನಿಮಿಷ @2 8 ದಿನಗಳು | ≤0.60 | ಕಾರ್ಸ್ಟನ್ ಟ್ಯೂಬ್ |
| 5 | ಬಲ್ಕ್ ಡೆನ್ಸಿಟಿ (g/cm3) | 1.3 - 1.7 | ಮನೆಯಲ್ಲಿ |

*ಈ ಮೌಲ್ಯವು ನಯವಾದ ಮೇಲ್ಮೈ ಕುರಿತದ್ದು; ಆದರೆ ಇದು ಮೇಲ್ಮೈ ಟೆಕ್ಸ್ಚರ್ ಪ್ರಕಾರ ಬೇರೆಯಾಗಬಹುದು.

## ಉಪಯೋಗಿಸುವ ಕಾರ್ಯವಿಧಾನ:

**1. ಮೇಲ್ಮೈಯ ಸಿದ್ಧತೆ:**

- ಸೂಕ್ತವಾದ ಎಮರಿ ಪೇಪರ್, ಪುಟ್ಟೀ ಬ್ಲೇಡ್ ಅಥವಾ ವೈರ್ ಬ್ರಶ್ ಇತ್ಯಾದಿಯನ್ನು ಬಳಸಿ ಕೊಳೆ, ಧೂಳು ಮತ್ತು ಎಣ್ಣೆಯಂತಹ ಸಡಿಲವಾಗಿ ಅಂಟಿಕೊಂಡ ಎಲ್ಲಾ ವಸ್ತುಗಳನ್ನೂ ಮೇಲ್ಮೈಯಿಂದ ತೆಗೆಯಿರಿ.
- ಟ್ರವೆಲ್ ಫಿನಿಶ್ ಬಳಸುವ ಮೊದಲು ತೂತುಗಳು, ನಗ್ಗುಗಳು ಮತ್ತು ಬಿರುಕುಗಳಂತಹ ಮೇಲ್ಮೈ ದೋಷಗಳನ್ನು ತುಂಬಿಸಬೇಕು.

**2. ಮೇಲ್ಮೈಯನ್ನು ಮುಂಚಿತವಾಗಿ ಒದ್ದೆ ಮಾಡುವುದು:**

ಅತ್ಯುತ್ತಮ ನುಣುಪು, ಕಾರ್ಯಸಾಧ್ಯತೆ, ಕವರೇಜ್ ಮತ್ತು ತನ್ನ ಅಡಿ ಪದರಕ್ಕೆ ಹೆಚ್ಚು ಗಟ್ಟಿಯಾಗಿ ಅಂಟಿಕೊಳ್ಳುವುದಕ್ಕೆ ಕಾಂಕ್ರೀಟ್ / ಪ್ಲಾಸ್ಟರ್ ಮೇಲ್ಮೈ ಮೇಲೆ 'ಟ್ರವೆಲ್ ಫಿನಿಶ್' ಬಳಸುವ ಮೊದಲು ಮೇಲ್ಮೈಯನ್ನು ಮುಂಚಿತವಾಗಿ ಒದ್ದೆ ಮಾಡುವುದು ಮುಖ್ಯವಾದದ್ದು.

**a. ಮಿಶ್ರಣದ ಅನುಪಾತ:**

ಏಕಪ್ರಕಾರದ ಪೇಸ್ಟ್ ಪಡೆಯುವುದಕ್ಕೆ 22 ರಿಂದ 25% ಸ್ವಚ್ಛ ನೀರನ್ನು ಸೇರಿಸಿ; ಆದರಿಂದ ಹೆಚ್ಚು ಕವರೇಜ್ ಮತ್ತು ನುಣುಪಾದ ಏಕಪ್ರಕಾರದ ಶೇಡ್ ದೊರೆಯುತ್ತದೆ. ನೀರಿನೊಂದಿಗೆ ಮಿಶ್ರ ಮಾಡಿದ 1-2 ಗಂಟೆಯೊಳಗೆ ಬಳಸಬಹುದಾದಷ್ಟು ಪ್ರಮಾಣವನ್ನು ಮಾತ್ರ ತಯಾರಿಸಿ.

**b. ಉಪಯೋಗಿಸುವ ಕಾರ್ಯವಿಧಾನ:**

- ಈ ಮಿಶ್ರಣವನ್ನು 2-3 ಎಮ್‌ಎಮ್ ದಪ್ಪದಷ್ಟು ಹಚ್ಚಿ; ನಂತರ ಅದನ್ನು ಸಮತಟ್ಟು ಮಾಡಿ ಏಕಪ್ರಕಾರದ ಮೇಲ್ಮೈ ಪಡೆದು ಹೆಚ್ಚುವರಿ ಮಿಶ್ರಣವನ್ನು ತೆಗೆಯಿರಿ.
- 5-0 ನಿಮಿಷಗಳ ಕಾಲ ಮೇಲ್ಮೈಯನ್ನು ಒಣಗಲು ಬಿಡಿ.
- ಡಿಸೈನ್‌ಗಳನ್ನು ಮಾಡಲು ಫೈಬರ್ ಟ್ರವೆಲ್ ಬಳಸಿ.



**ಉಪಯೋಗಿಸುವ ಕಾರ್ಯವಿಧಾನ :**
ಡಿಸೈನ್‌ಗಳನ್ನು ಮಾಡಲು ಫೈಬರ್ ಟ್ರವೆಲ್ ಬಳಸಿ.





ವರ್ಟಿಕಲ್ ಟೆಕ್ಸ್ಚರ್‌ನ ಫಿನಿಶ್ ಪಡೆಯಲು ಫೈಬರ್ ಟ್ರವೆಲ್‌ಅನ್ನು ಮೇಲಿನಿಂದ ಕೆಳಗೆ ಲಂಬವಾಗಿ ಆಡಿಸಿ.

**ವರ್ಟಿಕಲ್ ಫಿನಿಶ್**
**BWTF1001**





ಕ್ರಾಸ್ ಟೆಕ್ಸ್ಚರ್‌ನ ಫಿನಿಶ್ ಪಡೆಯಲು ಫೈಬರ್ ಟ್ರವೆಲ್‌ಅನ್ನು ಬಲದಿಂದ ಎಡಕ್ಕೆ ಮತ್ತು ಎಡದಿಂದ ಬಲಕ್ಕೆ ಡಯಗೊನಲ್ ಆಗಿ ಆಡಿಸಿ.

**ಕ್ರಾಸ್ ಫಿನಿಶ್**
**BWTF1002**





ಪ್ಲಸ್–ಮೈನಸ್ ಟೆಕ್ಸ್ಚರ್‌ನ ಫಿನಿಶ್ ಪಡೆಯಲು ಫೈಬರ್ ಟ್ರವೆಲ್‌ಅನ್ನು ಮೇಲಿನಿಂದ ಕೆಳಗೆ ಲಂಬವಾಗಿ ಮತ್ತು ಎಡದಿಂದ ಬಲಕ್ಕೆ ಅಡ್ಡಲಾಗಿ ಆಡಿಸಿ.

**ಪ್ಲಸ್-ಮೈನಸ್ ಫಿನಿಶ್**
**BWTF1003**





ರೈನ್ ಫಾಲ್ (ಮಳೆ ಬೀಳುತ್ತಿರುವ) ಟೆಕ್ಸ್ಚರ್‌ನ ಫಿನಿಶ್ ಪಡೆಯಲು ಫೈಬರ್ ಟ್ರವೆಲ್‌ಅನ್ನು ಬಲಗಡೆಯ ಮೇಲಿನಿಂದ ಎಡಗಡೆಯ ಕೆಳಕ್ಕೆ ಡಯಗೊನಲ್ ಆಗಿ ಆಡಿಸಿ.

**ರೈನ್ ಫಾಲ್ ಫಿನಿಶ್**
**BWTF1004**





ಹಾರಿಝೂಂಟಲ್ (ಅಡ್ಡಡ್ಡ) ಟೆಕ್ಸ್ಚರ್‌ನ ಫಿನಿಶ್ ಪಡೆಯಲು ಫೈಬರ್ ಟ್ರವೆಲ್‌ಅನ್ನು ಬಲದಿಂದ ಎಡಕ್ಕೆ ಅಥವಾ ಎಡದಿಂದ ಬಲಕ್ಕೆ ಲಂಬವಾಗಿ ಆಡಿಸಿ.

**ಹಾರಿಝೂಂಟಲ್ ಫಿನಿಶ್**
**BWTF1005**





ಸ್ವರ್ಲೀ (ಸುಳಿಸುತ್ತುವ) ಟೆಕ್ಸ್ಚರ್‌ನ ಫಿನಿಶ್ ಪಡೆಯಲು ಫೈಬರ್ ಟ್ರವೆಲ್‌ಅನ್ನು ರ್‍ಯಾಂಡಮ್ ಸರ್ಕಲ್‌ನಲ್ಲಿ ಅಥವಾ ಸ್ವರ್ಲಿಂಗ್ ಆಗಿ ಆಡಿಸಿ.

**ಸ್ವರ್ಲೀ ಫಿನಿಶ್**
**BWTF1006**

- ಸಾಧ್ಯವಾದರೆ, ಪೆಯಿಂಟ್/ಡಿಸ್ಟೆಂಪರ್ ಹಚ್ಚುವ ಮೊದಲು ಮೇಲ್ಮೈಯನ್ನು 10-12 ಗಂಟೆಗಳ ಕಾಲ ಒಣಗಲು ಬಿಡಿ.
- ಅಂತಿಮ ಫಿನಿಶ್ ಪಡೆಯುವುದಕ್ಕೆ ಮೇಲಿನ ಚಿತ್ರಗಳಲ್ಲಿ ತೋರಿಸಿರುವ ಹಾಗೆ ಪೆಯಿಂಟ್ ಬಣ್ಣಗಳನ್ನು ಹಚ್ಚಿ ಅಥವಾ ನಿಮ್ಮ ಇಷ್ಟದ ಯಾವುದೇ ಬಣ್ಣವನ್ನು ಬೇಕಾದರೂ ಆಯ್ದುಕೊಳ್ಳಿ.




# ರೋಲರ್/ಸ್ಪ್ರೇ ಫಿನಿಶ್

ಬಿರ್ಲಾ ವೈಟ್ ಟೆಕ್ಸ್ಚುರಾ ಸ್ಪ್ರೇ/ರೋಲರ್ ಫಿನಿಶ್ ಎಂಬುದು ಸೂಕ್ಷ್ಮ ಹಾಗೂ ಸುಖಕರ ಫಿನಿಶ್ ಆಗಿದ್ದು ಇದು ಒಳ ಗೋಡೆಗಳಿಗೆ ಆದರ್ಶಪ್ರಾಯವಾದದ್ದು. ಇದರಿಂದ ನಿಮ್ಮ ಗೋಡೆ ಎಷ್ಟು ಸೊಗಸಾಗಿ ಕಾಣುತ್ತದೆ ಅಂದರೆ ಇಡೀ ರೂಮು ಆಕರ್ಷಕ ಪೆಯಿಂಟಿಂಗ್ ಸೊಬಗನ್ನು ಪಡೆದುಕೊಳ್ಳುತ್ತದೆ. ಒಳಗೋಡೆಗಳಿಗೆ ನಿಮ್ಮ ಇಷ್ಟದ ನೋಟ ನೀಡುವುದಕ್ಕಾಗಿ ನೀವು ಇದನ್ನು ವಿವಿಧ ಬಣ್ಣಗಳು, ಶೇಡ್‌ಗಳು ಹಾಗೂ ಸೂಪರ್ ಸ್ಮೂತ್ ಫಿನಿಶ್‌ಗಳೊಂದಿಗೆ ಬಳಸಬಹುದು. ಈ ಫಿನಿಶ್‌ಅನ್ನು ಒದ್ದೆ ಗೋಡೆಯ ಮೇಲೂ ಹಚ್ಚಬಹುದು. ಇತರ ಆ್ಯಕ್ರಿಲಿಕ್ ಆಧಾರಿತ ಪ್ರಾಡಕ್ಟ್‌ಗಳಂತಲ್ಲದೆ, ರೋಲರ್ ಫಿನಿಶ್ ತುಂಬಾ ಹೆಚ್ಚು ಅಂಟಿಕೊಳ್ಳುವ ಶಕ್ತಿಯನ್ನು ಹೊಂದಿದ್ದು ಇದು ಹವಾಮಾನದ ದುಷ್ಪರಿಣಾಮಗಳನ್ನು ಪ್ರತಿರೋಧಿಸುತ್ತದೆ. ಜೊತೆಗೆ, ಇದು ಸಿಮೆಂಟ್ ಆಧಾರಿತವಾಗಿದ್ದರೂ, ಇದಕ್ಕೆ ಕ್ಯೂರಿಂಗ್ ಅಗತ್ಯವಿರುವುದಿಲ್ಲ.

## ತಾಂತ್ರಿಕ ವಿವರಗಳು

| ಕ್ರಮಾಂಕ | ತಾಂತ್ರಿಕ ವಿವರಗಳು | ನಿರ್ದಿಷ್ಟ ವಿವರಗಳು | ಪರೀಕ್ಷಾ ವಿಧಾನ |
|---|---|---|---|
| 1 | *ಕವರೇಜ್ (Sq.m/kg/coat)<br>[ಆದರ್ಶಪ್ರಾಯ ನಯವಾದ ಮೇಲ್ಮೈ ಮೇಲೆ] | ಡಿಸ್ಪೆನರ್ ರೋಲರ್ ಫಿನಿಶ್: 0.56-0.3<br>ಸ್ಪಾಂಜ್ ರೋಲರ್ ಫಿನಿಶ್: 0.74-1.1<br>ಸ್ಪ್ರೇ ಫಿನಿಶ್: 1.34-1.86 | ಮನೆಯಲ್ಲಿ |
| 2 | ಪಾಟ್ ಲೈಫ್ (ಗಂಟೆಗಳು) | 1.5 - 2.0 | ಮನೆಯಲ್ಲಿ |
| 3 | ಟೆನ್‌ಸೈಲ್ ಶಕಿ @28 ದಿನಗಳು (N/mm2) | ≥0.5 | EN 1348 |
| 4 | ನೀರಿನ ಕ್ಯಾಪಿಲ್ಲರಿಗಳ ಹೀರಿಕೆ (ml),<br>30 ನಿಮಿಷ@28 ದಿನಗಳು | ≤0.60 | ಕಾರ್ಸ್ಟನ್ ಟ್ಯೂಬ್ |
| 5 | ಬಲ್ಕ್ ಡೆನ್ಸಿಟಿ (g/cm3) | 0.9 - 1.1 | ಮನೆಯಲ್ಲಿ |

*ಈ ಮೌಲ್ಯವು ನಯವಾದ ಮೇಲ್ಮೈ ಕುರಿತದ್ದು; ಆದರೆ ಇದು ಮೇಲ್ಮೈ ಟೆಕ್ಸ್ಚರ್ ಪ್ರಕಾರ ಬೇರೆಯಾಗಬಹುದು.

## ಉಪಯೋಗಿಸುವ ಕಾರ್ಯವಿಧಾನ:



**1. ಮೇಲ್ಮೈಯ ಸಿದ್ಧತೆ:**

- ಸೂಕ್ತವಾದ ಎಮರಿ ಪೇಪರ್, ಪುಟ್ಟೀ ಬ್ಲೇಡ್ ಅಥವಾ ವೈರ್ ಬ್ರಶ್ ಇತ್ಯಾದಿಯನ್ನು ಬಳಸಿ ಕೊಳೆ, ಧೂಳು ಮತ್ತು ಎಣ್ಣೆಯಂತಹ ಸಡಿಲವಾಗಿ ಅಂಟಿಕೊಂಡ ಎಲ್ಲಾ ವಸ್ತುಗಳನ್ನೂ ಮೇಲ್ಮೈಯಿಂದ ತೆಗೆಯಿರಿ.
- ಟೆಕ್ಸ್‌ಚುರಾ ರೋಲರ್ / ಸ್ಪ್ರೇ ಫಿನಿಶ್ ಬಳಸುವ ಮೊದಲು ತೂತುಗಳು, ನಗ್ಗುಗಳು (dents) ಮತ್ತು ಬಿರುಕುಗಳಂತಹ ಮೇಲ್ಮೈ ದೋಷಗಳನ್ನು ತುಂಬಿಸಬೇಕು.



**2. ಮೇಲ್ಮೈಯನ್ನು ಮುಂಚಿತವಾಗಿ ಒದ್ದೆ ಮಾಡುವುದು:**

ಅತ್ಯುತ್ತಮ ನುಣುಪು, ಕಾರ್ಯಸಾಧ್ಯತೆ, ಕವರೇಜ್ ಮತ್ತು ತನ್ನ ಅಡಿ ಪದರಕ್ಕೆ ಹೆಚ್ಚು ಗಟ್ಟಿಯಾಗಿ ಅಂಟಿಕೊಳ್ಳುವುದಕ್ಕೆ ಕಾಂಕ್ರೀಟ್ / ಪ್ಲಾಸ್ಟರ್ ಮೇಲ್ಮೈ ಮೇಲೆ 'ಟೆಕ್ಸ್‌ಚುರಾ ರೋಲರ್ ಫಿನಿಶ್' ಬಳಸುವ ಮೊದಲು ಮೇಲ್ಮೈಯನ್ನು ಮುಂಚಿತವಾಗಿ ಒದ್ದೆ ಮಾಡುವುದು ಮುಖ್ಯವಾದದ್ದು.



**3. 'ಟೆಕ್ಸ್‌ಚುರಾ ರೋಲರ್ ಫಿನಿಶ್ ಮತ್ತು ಸ್ಪ್ರೇ ಫಿನಿಶ್'ಅನ್ನು ಮಿಶ್ರ ಮಾಡುವುದು**

ಏಕಪ್ರಕಾರದ ಪೇಸ್ಟ್ ಪಡೆಯುವುದಕ್ಕೆ ಟೆಕ್ಸ್‌ಚುರಾ–ಆರ್‌ಎಫ್‌ಅನ್ನು ಬೇರೆಬೇರೆ ಫಿನಿಶ್‌ಗಳಿಗೆ ಕೊಟ್ಟಿರುವ ನೀರಿನ ಅನುಪಾತದಲ್ಲಿ ಸರಿಯಾಗಿ ಮಿಶ್ರ ಮಾಡಿ; ಅದರಿಂದ ಹೆಚ್ಚು ಕವರೇಜ್ ಮತ್ತು ನುಣುಪಾದ ಏಕಪ್ರಕಾರದ ಶೇಡ್ ದೊರೆಯುತ್ತದೆ. ನೀರಿನೊಂದಿಗೆ ಮಿಶ್ರ ಮಾಡಿದ 1-2 ಗಂಟೆಯೊಳಗೆ ಬಳಸಬಹುದಾದಷ್ಟು ಪ್ರಮಾಣವನ್ನು ಮಾತ್ರ ತಯಾರಿಸಿ.

## ಸ್ಪಾಂಜ್ ರೋಲರ್:



**ಹನೀಕೋಂಬ್ ಫಿನಿಶ್**
**BWRF3004**



- 40-45% ನೀರನ್ನು ಸೇರಿಸಿ
- ಏಕಪ್ರಕಾರದ ಪೇಸ್ಟ್ ಪಡೆಯುವುದಕ್ಕೆ ಟೆಕ್ಸ್‌ಚುರಾ-ಆರ್‌ಎಫ್‌ಅನ್ನು 40-45% ನೀರಿನ ಅನುಪಾತದ ಪ್ರಕಾರ ಸರಿಯಾಗಿ ಮಿಶ್ರ ಮಾಡಿ; ಅದರಿಂದ ಹೆಚ್ಚು ಕವರೇಜ್ ಮತ್ತು ನುಣುಪಾದ ಏಕಪ್ರಕಾರದ ಶೇಡ್ ದೊರೆಯುತ್ತದೆ.
- ನಿಮ್ಮ ಇಷ್ಟದ ಪ್ಯಾಟರ್ನ್ ಪಡೆಯುವುದಕ್ಕೆ , ಸ್ಪಾಂಜ್ ರೋಲರ್‌ಅನ್ನು ಸ್ವಚ್ಛ ನೀರಿನಿಂದ ಒದ್ದೆ ಮಾಡಿ, ನಂತರ ತಯಾರಿಸಿದ ಪೇಸ್ಟ್‌ನಲ್ಲಿ ಅದನ್ನು ಅದ್ದಿ ನೇರವಾಗಿ ಗೋಡೆಯ ಮೇಲ್ಮೈಯ ಮೇಲೆ ಹಚ್ಚಿ .
- ನಿರೀಕ್ಷಿತ ಪ್ಯಾಟರ್ನ್ ಪಡೆಯುವುದಕ್ಕೆ ನೇರವಾಗಿ ಸಿದ್ಧಪಡಿಸಿದ ಮೇಲ್ಮೈ ಮೇಲೆ ಪುನಃ ಸ್ಪಾಂಜ್ ರೋಲರ್ ಆಡಿಸಿ.
- ಪೆಯಿಂಟ್/ಡಿಸ್‌ಟೆಂಪರ್ ಬಳಸುವ ಮೊದಲು ಸಾಧ್ಯವಾದರೆ 10-12 ಗಂಟೆಗಳ ಕಾಲ ಮೇಲ್ಮೈಯನ್ನು ಒಣಗಲು ಬಿಡಿ.
- ಅಂತಿಮ ಫಿನಿಶ್ ಪಡೆಯುವುದಕ್ಕೆ (ಚಿತ್ರದಲ್ಲಿ ತೋರಿಸಿರುವ ಹಾಗೆ) ಆಫ್ ವೈಟ್ ಪೆಯಿಂಟ್ ಹಚ್ಚಿ ಅಥವಾ ನಿಮ್ಮ ಇಷ್ಟದ ಯಾವುದೇ ಬಣ್ಣದ ಪೆಯಿಂಟನ್ನು ಬೇಕಾದರೂ ಹಚ್ಚಿ.



## ಡಿಸೈನರ್ ರಬ್ಬರ್ ರೋಲರ್:





**ಅಲಿಗೇಟರ್ ಫಿನಿಶ್**
**BWRF3001**





**ಸೀಮ್‌ಲೆಸ್ ಸರ್ಕಲ್ ಫಿನಿಶ್**
**BWRF3002**





**ವುಡ್ ಗ್ರೈನ್ ಫಿನಿಶ್**
**BWRF3003**

- ಏಕಪ್ರಕಾರದ ಪೇಸ್ಟ್ ಪಡೆಯುವುದಕ್ಕೆ ಟೆಕ್ಸ್‌ಚುರಾ-ಆರ್‌ಎಫ್‌ಅನ್ನು 32-36% ನೀರಿನ ಅನುಪಾತದ ಪ್ರಕಾರ ಸರಿಯಾಗಿ ಮಿಶ್ರ ಮಾಡಿ; ಅದರಿಂದ ಹೆಚ್ಚು ಕವರೇಜ್ ಮತ್ತು ನುಣುಪಾದ ಏಕಪ್ರಕಾರದ ಶೇಡ್ ದೊರೆಯುತ್ತದೆ.

- ರೋಲರ್‌ಅನ್ನು ಅವಲಂಬಿಸಿ ಸಿದ್ಧಪಡಿಸಿದ ಮೇಲ್ಮೈ ಮೇಲೆ ಮಿಶ್ರಣವನ್ನು ಟ್ರವೆಲ್‌ನಿಂದ 1-3 ಎಮ್‌ಎಮ್ ದಪ್ಪದಷ್ಟು ಹಚ್ಚಿ.

- ಏಕಪ್ರಕಾರದ ಮೇಲ್ಮೈ ಮತ್ತು ಹೆಚ್ಚು ಉತ್ತಮ ಡಿಸೈನ್ ಸ್ಪಷ್ಟತೆ ಪಡೆಯುವುದಕ್ಕೆ , ಹಚ್ಚಿದ ಮಿಶ್ರಣವನ್ನು ಟ್ರವೆಲ್ ಬಳಸಿ ಸಮತಟ್ಟು ಮಾಡಿ.

- ರೋಲರ್‌ಅನ್ನು ಸುಲಭವಾಗಿ ಆಡಿಸುವುದಕ್ಕೆ ಮೇಲ್ಮೈಯನ್ನು ಕನಿಷ್ಠ 5-10 ನಿಮಿಷ ಒಣಗಲು (ಅರ್ಧ ಒಣಗಲು) ಬಿಡಿ.

- ಡಿಸೈನರ್ ರೋಲರ್‌ಅನ್ನು ಸ್ವಚ್ಛ ನೀರಿನಿಂದ ಒದ್ದೆ ಮಾಡಿ; ನಿಮ್ಮ ಇಷ್ಟದ ಡಿಸೈನ್ ಪ್ರಕಾರ, ಮಿಶ್ರಣ ಹಚ್ಚಿದ ಮೇಲ್ಮೈ ಮೇಲೆ ಅದನ್ನು ಆಡಿಸಿ.

- (ಚಿತ್ರಗಳಲ್ಲಿ ತೋರಿಸಿರುವಂತೆ) ಸೀಮ್‌ಲೆಸ್ ಸರ್ಕಲ್ ರೋಲರ್, ವುಡ್‌ಗ್ರೈನ್ ಫಿನಿಶ್ ರೋಲರ್, ಅಲಿಗೇಟರ್ ಫಿನಿಶ್ ರೋಲರ್ ಅಥವಾ ಮಾರ್ಕೆಟ್ಟಿನಲ್ಲಿ ಲಭ್ಯವಿರುವ ನಿಮ್ಮ ಇಷ್ಟದ ಯಾವುದೇ ಡಿಸೈನರ್ ರೋಲರ್ ಆಯ್ಕೆ ಮಾಡಿ.

- ಪೆಯಿಂಟ್/ಡಿಸ್‌ಟೆಂಪರ್ ಬಳಸುವ ಮೊದಲು ಸಾಧ್ಯವಾದರೆ 10-12 ಗಂಟೆಗಳ ಕಾಲ ಮೇಲ್ಮೈಯನ್ನು ಒಣಗಲು ಬಿಡಿ.

- ಅಂತಿಮ ಫಿನಿಶ್ ಪಡೆಯುವುದಕ್ಕೆ ನಿಮ್ಮ ಇಷ್ಟದ ಯಾವುದೇ ಬಣ್ಣದ ಪೆಯಿಂಟನ್ನು ಬೇಕಾದರೂ ಹಚ್ಚಿ.

## ಸ್ಪ್ರೇ ಫಿನಿಶ್



ಬಬ್ಲ್ ಸ್ಪ್ರೇ ಫಿನಿಶ್
**BWSF2001**



- ಬ್ರಶ್ ಅಥವಾ ಫ್ಲ್ಯಾಟ್ ರೋಲರ್ ಬಳಸಿ 1 ಕೋಟ್ ಬಿರ್ಲಾ ವೈಟ್ ಪ್ರೈಮರ್ ಹಚ್ಚಿ.
- (ಚಿತ್ರದಲ್ಲಿ ನೀಲಿ ಪೆಯಿಂಟ್ ಇರುವಂತೆ) ಯಾವುದೇ ಕಲರ್ ಸ್ಟೈನರ್‌ಅನ್ನು ಬೇಸ್ ಕೋಟ್ ಆಗಿ ಬಳಸಿ; ನಂತರ ಆ ಪ್ರೈಮರ್ ಮೇಲೆ ಬ್ರಶ್ ಅಥವಾ ರೋಲರ್‌ನಿಂದ ಟೆಕ್ಸ್‌ಚುರಾ ಆರ್‌ಎಫ್ ಮಿಶ್ರಣದ (45-50% ನೀರಿನೊಂದಿಗೆ ಮಿಶ್ರ ಮಾಡಿ) 1 ಕೋಟ್‌ಅನ್ನು ಹಚ್ಚಿ.
- ಬೇಸ್ ಕೋಟ್ ಮೇಲ್ಮೈಯನ್ನು 3-4 ಗಂಟೆಗಳ ಕಾಲ ಒಣಗಲು ಬಿಡಿ.

- 42-50% ನೀರನ್ನು ಸೇರಿಸಿ ಬಿರ್ಲಾ ವೈಟ್ ಸ್ಪ್ರೇ ಫಿನಿಶ್ ಟೆಕ್ಸ್‌ಚುರಾ ಮಿಶ್ರಣವನ್ನು ತಯಾರಿಸಿ; ನಂತರ ಈ ಮಿಶ್ರಣಕ್ಕೆ ಗ್ರಾಹಕರು ಇಷ್ಟಪಡುವ ಪ್ರಮಾಣದ ಪ್ರಕಾರ (ಚಿತ್ರದಲ್ಲಿ ಹಳದಿ ಪೆಯಿಂಟ್ ಬಳಸಿರುವಂತೆ) ಕಲರ್ ಸ್ಟೈನರ್ ಸೇರಿಸಿ (ಚೆನ್ನಾಗಿ ಮಿಶ್ರ ಮಾಡಿ ಏಕಪ್ರಕಾರದ ಮಿಶ್ರಣ ತಯಾರಿಸಿ).
- ಏಕಪ್ರಕಾರದ ಮತ್ತು ನಿಮ್ಮ ಇಷ್ಟದ ಡಿಸೈನ್ ಪಡೆಯುವುದಕ್ಕೆ , ಏಕಪ್ರಕಾರದ ಮಿಶ್ರಣ ತಯಾರಿಸಿದ ನಂತರ, ಏರ್‌ಲೆಸ್ ಸ್ಪ್ರೇ ಗನ್ ಬಳಸಿ ಮಿಶ್ರಣವನ್ನು ಮೇಲ್ಮೈ ಮೇಲೆ ಮೇಲಿನಿಂದ ಕೆಳಕ್ಕೆ ಹಚ್ಚಿ.
- ಸಾಧ್ಯವಾದರೆ 10-12 ಗಂಟೆಗಳ ಕಾಲ ಮೇಲ್ಮೈಯನ್ನು ಒಣಗಲು ಬಿಡಿ.
- ಕಲರ್‌ನ ಬಾಳಿಕೆಯನ್ನು ಹೆಚ್ಚಿಸಲು ಪಾರದರ್ಶಕ ಸಿಲಿಕಾನ್ ಕೋಟಿಂಗ್‌ನ (ರಕ್ಷಣೆಯ ಕೋಟ್) ಒಂದು ಕೋಟನ್ನು ಹಚ್ಚಬಹುದು; ಅದರಿಂದ ಹೆಚ್ಚು ಹೊಳಪು ಮತ್ತು ಯಾವುದೇ ತರಹದ ಡ್ಯಾಮೇಜುಗಳಿಂದ ದೀರ್ಘಕಾಲದ ರಕ್ಷಣೆ ದೊರೆಯುತ್ತದೆ.



ಆರೆಂಜ್ ಪೀಲ್ ಫಿನಿಶ್
**BWSF2002**



- ಬ್ರಶ್ ಅಥವಾ ಫ್ಲ್ಯಾಟ್ ರೋಲರ್ ಬಳಸಿ 1 ಕೋಟ್ ಬಿರ್ಲಾ ವೈಟ್ ಪ್ರೈಮರ್ ಹಚ್ಚಿ.
- ಬ್ರಶ್ ಅಥವಾ ರೋಲರ್‌ನಿಂದ ಅದರ ಮೇಲೆ (45-50% ನೀರನ್ನು ಸೇರಿಸಿದ) ಟೆಕ್ಸ್‌ಚುರಾ ಆರ್‌ಎಫ್ ಮಿಶ್ರಣದ 1 ಕೋಟನ್ನು ಹಚ್ಚಿ.
- ಬೇಸ್ ಕೋಟ್ ಮೇಲ್ಮೈಯನ್ನು 3-4 ಗಂಟೆಗಳ ಕಾಲ ಒಣಗಲು ಬಿಡಿ.
- 42-50% ನೀರನ್ನು ಸೇರಿಸಿ ಬಿರ್ಲಾ ವೈಟ್ ಸ್ಪ್ರೇ ಫಿನಿಶ್ ಟೆಕ್ಸ್‌ಚುರಾ ಮಿಶ್ರಣವನ್ನು ತಯಾರಿಸಿ.

- (ಬಬ್ಲ್ ರೂಪದಲ್ಲಿ) ಏಕಪ್ರಕಾರದ ಮತ್ತು ನಿಮ್ಮ ಇಷ್ಟದ ಡಿಸೈನ್ ಪಡೆಯುವುದಕ್ಕೆ , ಏಕಪ್ರಕಾರದ ಮಿಶ್ರಣ ತಯಾರಿಸಿದ ನಂತರ, ಏರ್‌ಲೆಸ್ ಸ್ಪ್ರೇ ಗನ್ ಬಳಸಿ ಮಿಶ್ರಣವನ್ನು ಮೇಲ್ಮೈ ಮೇಲೆ ಮೇಲಿನಿಂದ ಕೆಳಕ್ಕೆ ಹಚ್ಚಿ.
- ಆರೆಂಜ್ ಪೀಲ್ ಫಿನಿಶ್ ಪಡೆಯುವುದಕ್ಕೆ ಹಚ್ಚಿರುವ ಬಬ್ಲ್‌ಅನ್ನು ಟ್ರವೆಲ್‌ನಿಂದ ಒತ್ತಿ.
- ಪೆಯಿಂಟ್ ಅಥವಾ ಡಿಸ್‌ಟೆಂಪರ್ ಹಚ್ಚುವ ಮೊದಲು ಸಾಧ್ಯವಾದರೆ 10-12 ಗಂಟೆಗಳ ಕಾಲ ಮೇಲ್ಮೈಯನ್ನು ಒಣಗಲು ಬಿಡಿ.
- ಅಂತಿಮ ಫಿನಿಶ್ ಪಡೆಯುವುದಕ್ಕೆ , (ಚಿತ್ರದಲ್ಲಿ ತೋರಿಸಿರುವಂತೆ) ಮೇಲ್ಮೈ ಮೇಲೆ ಮೆಟ್ಯಾಲಿಕ್ ಸಿಲ್ವರ್ ಕಲರ್ ಪೆಯಿಂಟ್ ಅಥವಾ ನಿಮ್ಮ ಇಷ್ಟದ ಯಾವುದೇ ಕಲರ್ ಪೆಯಿಂಟ್ ಹಚ್ಚಿ.
- ಕಲರ್‌ನ ಬಾಳಿಕೆಯನ್ನು ಹೆಚ್ಚಿಸಲು ಪಾರದರ್ಶಕ ಸಿಲಿಕಾನ್ ಕೋಟಿಂಗ್‌ನ (ರಕ್ಷಣೆಯ ಕೋಟ್) ಒಂದು ಕೋಟನ್ನು ಹಚ್ಚಬಹುದು; ಅದರಿಂದ ಹೆಚ್ಚು ಹೊಳಪು ಮತ್ತು ಯಾವುದೇ ತರಹದ ಡ್ಯಾಮೇಜುಗಳಿಂದ ದೀರ್ಘಕಾಲದ ರಕ್ಷಣೆ ದೊರೆಯುತ್ತದೆ.

**ಮುನ್ನೆಚ್ಚರಿಕೆಗಳು :**

- ಒಳ್ಳೆಯ ಸ್ಥಿತಿಯಲ್ಲಿರುವ, ಸ್ವಚ್ಛ, ಒಣಗಿದ ಮತ್ತು ಈ ಪ್ರಾಡಕ್ಟ್ ಮೇಲ್ಮೈಗೆ ಅಂಟಿಕೊಳ್ಳುವುದಕ್ಕೆ ಅಡ್ಡಬರಬಹುದಾದ ಯಾವುದೇ ಉಳಿಕೆ/ಕೊಳೆ ಇಲ್ಲದ ಮೇಲ್ಮೈಗಳಿಗೆ ಮಾತ್ರ ಇದನ್ನು ಬಳಸಿ. ಅಧಿಕ ತೇವಾಂಶ ಅಥವಾ ತುಂಬಾ ಟ್ರ್ಯಾಫಿಕ್ ಇರುವ  ಏರಿಯಾಗಳಲ್ಲಿ ಸಿಮೆಂಟ್ ಆಧಾರಿತ ಸೀಲರ್ ಬಳಸಬೇಕು ಎಂದು ಶಿಫಾರಸು ಮಾಡಲಾಗುತ್ತದೆ.
- ಟೆಕ್ಸ್‌ಚುರಾ ಸಾಮಗ್ರಿಯನ್ನು ಬ್ಯಾಗಿನಿಂದ ತೆಗೆಯುವಾಗ ಬ್ಯಾಗನನ್ನು ಚೆನ್ನಾಗಿ ಅಲ್ಲಾಡಿಸಬೇಕು.
- ಸಾಮಗ್ರಿಯು ಬೇಗ ಒಣಗುವುದನ್ನು ತಪ್ಪಿಸುವುದಕ್ಕಾಗಿ, ಹಚ್ಚುವ ಮೊದಲು ಒದ್ದೆ ಮಾಡುವುದು ಅಗತ್ಯ .
- ಪರಿಸರದ ಉಷ್ಣತೆ 10° ಸೆಂ–ಗಿಂತ ಕಡಿಮೆ ಇದ್ದರೆ ಅಥವಾ ಇದನ್ನು ಹಚ್ಚಿ 4 ಗಂಟೆಗಳಾಗುವುದರೊಳಗೆ ಉಷ್ಣತೆ ಈ ಮಟ್ಟಕ್ಕೆ ಇಳಿಯುವ ನಿರೀಕ್ಷೆ ಇದ್ದರೆ ಇದನ್ನು ಹಚ್ಚಬೇಡಿ.
- ತೆಳ್ಳಗೆ ಮಾಡಬಾರದು ಎಂದು ಸಲಹೆ ಮಾಡಲಾಗುತ್ತದೆ. 60 ನಿಮಿಷಗಳೊಳಗೆ ಬಳಸಲು ಅಗತ್ಯವಿರುವ ಪ್ರಮಾಣದ ಮಿಶ್ರಣವನ್ನು ಮಾತ್ರ ತಯಾರಿಸಬೇಕು.
- ಸಾಮಗ್ರಿಯನ್ನು ಹೆಚ್ಚು ಹೊತ್ತು ತೆರೆದು ಇಡಬೇಡಿ.
- ಸತತವಾಗಿ ಸೀಪೇಜ್ ಆಗುವ ಅಥವಾ ಸತತವಾಗಿ ಒದ್ದೆಯಾಗಿರುವ ಮೇಲ್ಮೈಗಳ ಮೇಲೆ/ಅಡಿಪದರಗಳ ಮೇಲೆ ಈ ಪ್ರಾಡಕ್ಟನ್ನು ಬಳಸುವಂತಿಲ್ಲ.
- ಬಳಸುವ ಮೊದಲು ಚೆನ್ನಾಗಿ ಕದಡಿರಿ.

**ಸುರಕ್ಷತಾ ಕ್ರಮಗಳು :**

- ಬಿರ್ಲಾ ವೈಟ್ ಟೆಕ್ಸ್‌ಚುರಾ–ಟಿಎಫ್ ಮತ್ತು ಟೆಕ್ಸ್‌ಚುರಾ ಆರ್‌ಎಫ್/ಎಸ್‌ಎಫ್ ಪ್ಯಾಕನ್ನು ಒಣಗಿದ ಜಾಗದಲ್ಲಿ ಮಕ್ಕಳ ಕೈಗೆ ಸಿಗದಂತೆ ಇಡಿ.
- ನುಂಗಿದರೆ ಹಾನಿಕಾರಕವಾಗಬಹುದು. ಒಂದುವೇಳೆ ನುಂಗಿದರೆ, ತಕ್ಷಣವೇ ವೈದ್ಯಕೀಯ ನೆರವು ಪಡೆದುಕೊಳ್ಳಿ .
- ಹಚ್ಚುವಾಗ ಕಣ್ಣನ್ನು ರಕ್ಷಿಸುವ ಸಾಧನವನ್ನು ಧರಿಸಿರಿ.
- ಒಂದುವೇಳೆ ಕಣ್ಣಿಗೆ ತಗುಲಿದರೆ, ತಕ್ಷಣವೇ ಯಥೇಚ್ಛ ನೀರು ಹಾಕಿ ಕಣ್ಣನ್ನು ಚೆನ್ನಾಗಿ ತೊಳೆಯಿರಿ ಮತ್ತು ವೈದ್ಯಕೀಯ ನೆರವು ಪಡೆದುಕೊಳ್ಳಿರಿ. ಚರ್ಮಕ್ಕೆ ತಗುಲಿದರೆ, ತಕ್ಷಣವೇ ಸೋಪು ಮತ್ತು ಯಥೇಚ್ಛ ನೀರು ಬಳಸಿ ಚರ್ಮವನ್ನು ತೊಳೆಯಿರಿ.
- ಕಿರಿಕಿರಿ ಉಂಟಾದರೆ ಅಥವಾ ಹೋಗದೆ ಹಾಗೆಯೇ ಉಳಿದರೆ, ವೈದ್ಯಕೀಯ ಚಿಕಿತ್ಸೆ ಪಡೆದುಕೊಳ್ಳಿ . ಬಾಷ್ಪ ಅಥವಾ ಸ್ಪ್ರೇಯನ್ನು ಉಸಿರಾಡಬೇಡಿ.
- ಉಸಿರಲ್ಲಿ  ಧೂಳನ್ನು ಎಳೆದುಕೊಳ್ಳುವುದನ್ನು ತಪ್ಪಿಸಲು ಸ್ಯಾಂಡಿಂಗ್ ಮತ್ತು ಮೇಲ್ಮೈ ಸಿದ್ಧಪಡಿಸುವ ಸಮಯದಲ್ಲಿ ಸೂಕ್ತವಾದ ಮೂಗಿನ ಪ್ಯಾಡನ್ನು  ಧರಿಸಿಕೊಳ್ಳಬೇಕು ಎಂದು  ಶಿಫಾರಸು ಮಾಡಲಾಗುತ್ತದೆ.



Birla White
Textura


**ಬಿರ್ಲಾ ವೈಟ್ - ಅಲ್ಟ್ರಾಟೆಕ್ ಸಿಮೆಂಟ್ ಲಿಮಿಟೆಡ್‌ನ ಒಂದು ಯೂನಿಟ್,**
9ನೇ ಮಹಡಿ, ಬಿರ್ಲಾ ಸೆಂಚೂರಿಯನ್, ಪಾಂಡುರಂಗ್ ಬುಧ್‌ಕರ್ ಮಾರ್ಗ್, ವರ್ಲಿ, ಮುಂಬೈ - 400030.
ಟೆಲಿಫೋನ್ ಬೋರ್ಡ್ ನಂ.ಗಳು : 022- 68540444 / 50365111

ವೆಬ್‌ಸೈಟ್: www.birlawhite.com | ಟೋಲ್ ಫ್ರೀ ನಂ.: 1800 11 1717
www.facebook.com/BirlaWhiteCement | twitter.com/BirlaWhite


**ಇಲ್ಲಿ ಸ್ಕ್ಯಾನ್ ಮಾಡಿ**

